## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : 290 (2269) |
| ಸದಸ್ಯರ ಹೆಸರು | : ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : 21.03.2022 |
| ಉತ್ತರಿಸುವವರು | : ಅರಣ್ಯ ಹಾಗೂ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಶ್ರೀಗಂಧ ಬೆಳೆಯಲು ಮತ್ತು ಮಾರಾಟ ಮಾಡಲು ಅರಣ್ಯ ಇಲಾಖೆಯ ಅನುಮತಿ ಅಗತ್ಯವಿದೆಯೇ; ಅಗತ್ಯವಿದ್ದಲ್ಲಿ ಈ ಸಂಬಂಧ ಇಲಾಖೆಯು ರೂಪಿಸಿರುವ ನಿಯಮಗಳೇನು; ಹೆಚ್ಚು ಶ್ರೀಗಂಧ ಬೆಳೆಯಲು ಅರಣ್ಯ ಇಲಾಖೆಯು ಪ್ರೋತ್ಸಾಹ ನೀಡುತ್ತಿದೆಯೇ; ನೀಡುತ್ತಿದ್ದಲ್ಲಿ, ಈ ಸಂಬಂಧ ಇಲಾಖೆಯು ರೂಪಿಸಿರುವ ಕಾರ್ಯಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು) | ರಾಜ್ಯದಲ್ಲಿ ಶ್ರೀಗಂಧ ಬೆಳೆಯಲು ಅರಣ್ಯ ಇಲಾಖೆಯ ಅನುಮತಿ ಅಗತ್ಯವಿರುವುದಿಲ್ಲ.<br>ರಾಜ್ಯದಲ್ಲಿ ಶ್ರೀಗಂಧ ಮಾರಾಟ ಮಾಡುವ ಕುರಿತು, ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಇಇ 16 ಎಫ್‌ಎಸ್‌ಡಬ್ಲ್ಯೂ 2001, ದಿನಾಂಕ 05.09.2002ರಲ್ಲಿ ತಿದ್ದುಪಡಿ ಮಾಡಿರುವ ಕರ್ನಾಟಕ ಅರಣ್ಯ ನಿಯಮಾವಳಿ, 1969ರ ನಿಯಮ 108ರನ್ವಯ, ಶ್ರೀಗಂಧ ಮರಗಳ ಮಾಲೀಕರು ಶ್ರೀಗಂಧ ಮರಗಳನ್ನು ಮೈಸೂರು, ಶಿವಮೊಗ್ಗ ಮತ್ತು ಧಾರವಾಡ ಸರ್ಕಾರಿ ಶ್ರೀಗಂಧದ ಕೋಠಿಗಳಿಗೆ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಇಇ 31 ಎಫ್‌ಎಸ್‌ಡಬ್ಲ್ಯೂ 2008, ದಿನಾಂಕ 11.07.2008ರನ್ವಯ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ ಮತ್ತು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಸಂಸ್ಥೆಗಳಿಗೆ ಮಾರಾಟ ಮಾಡಬಹುದಾಗಿರುತ್ತದೆ.<br>**(ಸರ್ಕಾರದ ಆದೇಶದ ಪ್ರತಿಯನ್ನು ಅನುಬಂಧ-1ರಲ್ಲಿ ಒದಗಿಸಿದೆ.)**<br><br>ಇಲಾಖಾ ವತಿಯಿಂದ ರೈತರ ಜಮೀನುಗಳಲ್ಲಿ/ ಸಾರ್ವಜನಿಕ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಶ್ರೀಗಂಧದ ಮರಗಳನ್ನು ಬೆಳೆಸಲು ಪ್ರೋತ್ಸಾಹವನ್ನು ನೀಡಲಾಗುತ್ತಿದೆ. ಈ ನಿಟ್ಟಿನಲ್ಲಿ ಇಲಾಖೆಯಿಂದ ಸಾರ್ವಜನಿಕ ವಿತರಣೆಗಾಗಿ ಸಸಿಗಳನ್ನು ಬೆಳೆಸುವ ಕಾರ್ಯಕ್ರಮದಡಿ ರೈತರ/ ಸಾರ್ವಜನಿಕರ ಬೇಡಿಕೆಯನುಸಾರ ಸಸಿಗಳನ್ನು ಸರ್ಕಾರದಿಂದ ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದೆ. ಇದರಡಿ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ನೋಂದಾಯಿಸಿಕೊಂಡ ಅರ್ಹ ಫಲಾನುಭವಿಗಳಿಗೆ ಅವರ ಜಮೀನುಗಳಲ್ಲಿ ನೆಟ್ಟು ಬದುಕುಳಿದ ಸಸಿಗಳಿಗೆ ಸರ್ಕಾರಿ ಆದೇಶ ಸಂಖ್ಯೆ:ಅಪಜೀ 88 ಎಫ್‌ಎಪಿ 2019, ದಿನಾಂಕ:27.12.2019ರಂತೆ 1ನೇ ವರ್ಷದ ಅಂತ್ಯದಲ್ಲಿ ರೂ.35/-, 2ನೇ ವರ್ಷದ ಅಂತ್ಯದಲ್ಲಿ ರೂ.40/-, 3ನೇ ವರ್ಷದ ಅಂತ್ಯದಲ್ಲಿ ರೂ.50/- ಹೀಗೆ ಒಟ್ಟು ರೂ.125/- ಗಳನ್ನು ಒಬ್ಬ ಫಲಾನುಭವಿಗೆ ಒಂದು ಬದುಕುಳಿದ ಸಸಿಗೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ. |
| ಆ) | ರಾಜ್ಯದ ರೈತರಿಗೆ ಅರಣ್ಯ ಇಲಾಖೆಯಿಂದ ಶ್ರೀಗಂಧದ ಸಸಿಗಳನ್ನು ಸರಬರಾಜು ಮಾಡಲಾಗುತ್ತಿದೆಯೇ; ಇಲ್ಲದಿದ್ದಲ್ಲಿ ಯಾರು ಸರಬರಾಜು ಮಾಡುತ್ತಿದ್ದಾರೆ; ಪ್ರತಿ ಸಸಿಗೆ ತಗಲುವ ವೆಚ್ಚ ವೆಷ್ಟು; ರಾಜ್ಯದಲ್ಲಿ ಎಷ್ಟು ಹೆಕ್ಟೇರ್ ವಿಸ್ತೀರ್ಣದಲ್ಲಿ ಶ್ರೀಗಂಧ | ರಾಜ್ಯದ ರೈತರಿಗೆ ಅರಣ್ಯ ಇಲಾಖೆಯಿಂದ ಶ್ರೀಗಂಧದ ಸಸಿಗಳನ್ನು ರಿಯಾಯಿತಿ ದರದಲ್ಲಿ ಅವರ ಬೇಡಿಕೆಯನುಸಾರ ಸರಬರಾಜು ಮಾಡಲಾಗುತ್ತಿದೆ. |

by

<table>
<tr>
<td></td>
<td>ಬೆಳೆಯಲಾಗಿದೆ; ಎಷ್ಟು ಜನ ಬೆಳೆಗಾರರಿದ್ದಾರೆ; (ಜಿಲ್ಲಾವಾರು ಮಾಹಿತಿ ನೀಡುವುದು)</td>
<td>ಇಲಾಖಾ ವತಿಯಿಂದ ರೈತರ ವಿತರಣೆಗಾಗಿ ಬೆಳೆಸುವ ಸಸಿಗಳಿಗೆ ತಗುಲುವ ವೆಚ್ಚದ ವಿವರ ಈ ಕೆಳಕಂಡಂತಿದೆ.
<table>
<tr><th>ಸಸಿಗಳ ಅಳತೆ</th><th>ಬೆಳೆಸುವ ವೆಚ್ಚ (ರೂ.ಗಳಲ್ಲಿ)</th><th>ನಿರ್ವಹಣೆ ವೆಚ್ಚ (ರೂ.ಗಳಲ್ಲಿ)</th><th>ಒಟ್ಟು ಪ್ರತಿ ಸಸಿಗೆ ತಗಲುವ ವೆಚ್ಚ (ರೂ.ಗಳಲ್ಲಿ)</th></tr>
<tr><td>8" X 12"</td><td>24.36</td><td>7.16</td><td>31.52</td></tr>
</table>
ರೈತರಿಗೆ 8" X 12" ಅಳತೆಯ ಸಸಿಗಳನ್ನು ಪ್ರತಿ ಸಸಿಗೆ ರೂ.3/-ರಂತೆ ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದೆ.<br><br>ರಾಜ್ಯದಲ್ಲಿ ಅರಣ್ಯ ಪ್ರದೇಶಗಳಲ್ಲಿ ಸ್ವಾಭಾವಿಕವಾಗಿ ಮತ್ತು ನೆಡುತೋಪು ನಿರ್ಮಾಣದ ಮೂಲಕ ಒಟ್ಟಾರೆ 4,699 ಹೆಕ್ಟೇರ್ ಪ್ರದೇಶಗಳಲ್ಲಿ ಬೆಳೆಯಲಾಗಿರುತ್ತದೆ.<br>ಸಾರ್ವಜನಿಕರ ವಿತರಣೆಗಾಗಿ ಸಸಿಗಳನ್ನು ಬೆಳೆಸುವ ಕಾರ್ಯಕ್ರಮದಡಿ ರೈತರಿಗೆ ರಿಯಾಯಿತಿ ದರಗಳಲ್ಲಿ ವಿವಿಧ ಜಾತಿಯ ಸಸಿಗಳೊಂದಿಗೆ ಶ್ರೀಗಂಧದ ಸಸಿಗಳನ್ನು ಸಹ ವಿತರಿಸಲಾಗುತ್ತಿದ್ದು, ಶ್ರೀಗಂಧದ ಸಸಿಗಳನ್ನು ಬೆಳೆಸಿದ ಬೆಳೆಗಾರರ ವಿವರಗಳನ್ನು ಪ್ರತ್ಯೇಕವಾಗಿ ನಿರ್ವಹಿಸುತ್ತಿಲ್ಲ.</td>
</tr>
<tr>
<td>ಇ)</td>
<td>ಕಟಾವಿಗೆ ಬಂದ ಶ್ರೀಗಂಧಕ್ಕೆ ಮಾರುಕಟ್ಟೆಯಲ್ಲಿ ಲಭ್ಯವಿರುವ ದರವೆಷ್ಟು; ಅದಕ್ಕೆ ಅರಣ್ಯ ಇಲಾಖೆ ಮತ್ತು ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ನಿಗಮವು ನಿಗದಿಪಡಿಸಿರುವ ಬೆಲೆಯೆಷ್ಟು; (ಕಳೆದ 5 ವರ್ಷಗಳ ಮಾಹಿತಿ ನೀಡುವುದು)</td>
<td>ಕರ್ನಾಟಕ ಅರಣ್ಯ ನಿಯಮಾವಳಿ, 1969ರನಿಯಮ 108(5), 108(6)ರನ್ವಯ ಕಟಾವಿಗೆ ಬಂದ ಶ್ರೀಗಂಧವನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಅವಕಾಶ ಇಲ್ಲದಿರುವುದರಿಂದ, ಮಾರುಕಟ್ಟೆಯ ದರಗಳ ಬಗ್ಗೆ ಮಾಹಿತಿ ಇರುವುದಿಲ್ಲ.<br><br>ಸರ್ಕಾರವು ನಿಗದಿಪಡಿಸುವ ಪ್ರತಿಯೊಂದು ಶ್ರೀಗಂಧ ವರ್ಗದ ಚಿಲ್ಲರೆ ಮಾರಾಟ ದರಗಳನ್ವಯ ಅರಣ್ಯ ಇಲಾಖೆ ಮತ್ತು ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ನಿಗಮವು ಬೆಲೆಯನ್ನು ನೀಡುತ್ತದೆ.<br><br>ಕಳೆದ ಐದು ವರ್ಷಗಳಿಗೆ ಪ್ರತಿಯೊಂದು ಶ್ರೀಗಂಧ ವರ್ಗಕ್ಕೆ ಸರ್ಕಾರವು ನಿಗದಿಪಡಿಸಿರುವ ಚಿಲ್ಲರೆ ಮಾರಾಟ ದರಗಳ ಮಾಹಿತಿಯನ್ನು ಅನುಬಂಧ-2ರಲ್ಲಿ ಒದಗಿಸಿದೆ.</td>
</tr>
<tr>
<td>ಈ)</td>
<td>ಶ್ರೀಗಂಧಕ್ಕೆ ಮಾರುಕಟ್ಟೆಯಲ್ಲಿ ಲಕ್ಷಾಂತರ ರೂಪಾಯಿ ಬೆಲೆಯಿದ್ದರೂ ಅರಣ್ಯ ಇಲಾಖೆಯು ಅತ್ಯಂತ ಕಡಿಮೆ ಬೆಲೆನಿಗದಿ ಮಾಡಿ ರೈತರಿಗೆ ಮೋಸ ಮಾಡುತ್ತಿರುವ ಆರೋಪಗಳು ಕೇಳಿಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)</td>
<td>ಸರ್ಕಾರವು ಎಂಎಸ್‌ಟಿಸಿ ಸಂಸ್ಥೆಯ ಇ-ಪೋರ್ಟಲ್ ಮೂಲಕ ಇ-ಹರಾಜಿನಲ್ಲಿ ಪಡೆದ ಪ್ರತಿಯೊಂದು ದರಗಳ ಅನ್ವಯ, ಶ್ರೀಗಂಧ ವರ್ಗಕ್ಕೆ ನಿಗದಿಪಡಿಸುವ ಚಿಲ್ಲರೆ ಮಾರಾಟ ದರಗಳನ್ವಯ ಅರಣ್ಯ ಇಲಾಖೆಯು ರೈತರಿಗೆ ಶ್ರೀಗಂಧ ಬೋನಸ್ ಮೊತ್ತವನ್ನು ಪಾವತಿ ಮಾಡಲಾಗುತ್ತಿರುವುದರಿಂದ, ರೈತರಿಗೆ ಯಾವುದೇ ಮೋಸವಾಗುತ್ತಿಲ್ಲ ಹಾಗೂ ಸಾಕ್ಷ್ಯಾಧಾರ ಜೊತೆಗೆ ಯಾವುದೇ ಆರೋಪಗಳು ಬಂದಿರುವುದಿಲ್ಲ.</td>
</tr>
</table>

ಸಂಖ್ಯೆ: ಅಪಜೀ 20 ಎಫ್‌ಡಿಪಿ 2022

(ಉಮೇಶ್ ವಿ. ಕತ್ತಿ)
ಅರಣ್ಯ ಹಾಗೂ ಆಹಾರ, ನಾಗರೀಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು

ಅನುಬಂಧ-1

FAX NO. : 22254434 ... JUL. ... 03:39PM P1

# GOVERNMENT OF KARNATAKA

No. FEE 21 FSW 2008

Karnataka Government Secretariat,
M.S. Building,
Bangalore, Dated: 11-07-2008.

## NOTIFICATION

The Government of Karnataka hereby notifies the following Public Sector Undertakings under Rule 108 (1) of the Karnataka Forest Rules 1969 (2002 amendment) to whom the "owner" as defined under Rule 103(C) of the Karnataka Forest Rules 1969 (2002 amendment) can sell the sandalwood trees from any land, on which the "owner" possess a right there to.

1) Karnataka State Handicraft Development Corporation Ltd.
2) Karnataka Soaps and Detergents Ltd.,

The above notified Public Sector Undertakings are permitted to purchase the said sandalwood from the "owner" at prices negotiated by them with the "owner".

The Public Sector Undertakings / Defence Department / Para military Organisations on whose lands sandal wood is cultivated or has grown naturally are treated as "owner" as per Rule 103 (C) of Karnataka Forest Rules 1969 (2002 amendment).

15-JUL-2008

By order and in the name of the
Governor of Karnataka,

(GOPAL)
Under Secretary to Government,
Forest, Ecology & Environment Department.

To:

The Compiler, Karnataka Gazette, Bangalore - with a request to publish it in extra ordinary gazette and supply 200 copies to the undersigned and 200 copies to the Principal Chief Conservator of Forests, Aranya Bhavan, Malleshwaram, Bangalore.

Copy to:-

1) The Accountant General (A&E), Karnataka, Bangalore.

## ಅನುಬಂಧ-2 (ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2269)

| ಕ್ರ.ಸಂ. | ಶ್ರೀಗಂಧದ ವರ್ಗ | ದರ ರೂ.ಗಳಲ್ಲಿ (ಪ್ರತಿ ಕೆ.ಜಿ.ಗೆ) | | |
|---|---|---|---|---|
| | | 04.07.2016 ರಿಂದ 23.09.2018 | 24.09.2018 ರಿಂದ 09.03.2021 | 10.03.2021 ರಿಂದ ಇಲ್ಲಿಯವರೆಗೆ |
| A | HEART WOOD | | | |
| 1 | Vilayetbudh (Billets-I) | 10285.00 | 10285.00 | 12200.00 |
| 2 | Chinnabudh (Billets-II) | 10897.00 | 10897.00 | 10900.00 |
| 3 | Panjam (Billets-III) | 9877.00 | 9877.00 | 10000.00 |
| 4 | Ghotla | 6410.00 | 6410.00 | 7000.00 |
| 5 | Ghatabadla | 9137.00 | 9137.00 | 12700.00 |
| 6 | Bagardad | 8792.00 | 8792.00 | 10900.00 |
| 7 | Roots-I | 4920.00 | 5576.00 | 9700.00 |
| 8 | Roots-II | 4980.00 | 5502.00 | 8300.00 |
| 9 | Roots-III | 5100.00 | 8200.00 | 8500.00 |
| 10 | Jajpokal-I | 10939.00 | 10939.00 | 13700.00 |
| 11 | Jajpokal-II | 10388.00 | 10388.00 | 10600.00 |
| 12 | Ainbagar | 7150.00 | 8827.00 | 8900.00 |
| 13 | Cheriya | 4350.00 | 4829.00 | 5500.00 |
| 14 | Ain Chilta | 4569.00 | 5020.00 | 5400.00 |
| 15 | Hatri Chilta | 2585.00 | 2585.00 | 2850.00 |
| B | MIXED WOOD | | | |
| 16 | Milvachilta | 2153.00 | 2802.00 | 3400.00 |
| 17 | Basola buini | 1728.00 | 3517.00 | 3600.00 |
| 18 | Sawdust | 750.00 | 750.00 | 810.00 |
| C | SAP WOOD | | | |
| 19 | White chips | 80.00 | 89.00 | 105.00 |
| 20 | Bark & Waste | 24.00 | 24.00 | 25.00 |

ಚುಕ್ಕೆ ಗುರುತಿನ
ಪ್ರಶ್ನೆ ಸಂಖ್ಯೆ-2269 21-03-22.

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 290(2269)ಕ್ಕೆ ಸಂಬಂಧಿಸಿದಂತೆ ದಿನಾಂಕ: 29-03-2022 ರಂದು ಮಾನ್ಯ ವಿಧಾನ ಪರಿಷತ್ತಿನಲ್ಲಿ ಬರಲಿರುವ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಹೆಚ್ಚುವರಿ ಮಾಹಿತಿ.**

ರಾಜ್ಯದಲ್ಲಿ ಶ್ರೀಗಂಧ ಮಾರಾಟ ಮಾಡುವ ಕುರಿತು, ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಇಇ 16 ಎಫ್‌ಎಸ್‌ಡಬ್ಲ್ಯೂ 2001, ದಿನಾಂಕ 05.09.2002ರಲ್ಲಿ ತಿದ್ದುಪಡಿ ಮಾಡಿರುವ ಕರ್ನಾಟಕ ಅರಣ್ಯ ನಿಯಮಾವಳಿ, 1969ರ ನಿಯಮ 108ರನ್ವಯ, ಶ್ರೀಗಂಧ ಮರಗಳ ಮಾಲೀಕರು ಶ್ರೀಗಂಧ ಮರಗಳನ್ನು ಮೈಸೂರು, ಶಿವಮೊಗ್ಗ ಮತ್ತು ಧಾರವಾಡ ಸರ್ಕಾರಿ ಶ್ರೀಗಂಧದ ಕೋಠಿಗಳಿಗೆ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಇಇ 31 ಎಫ್‌ಎಸ್‌ಡಬ್ಲ್ಯೂ 2008, ದಿನಾಂಕ 11.07.2008ರನ್ವಯ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ ಮತ್ತು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಸಂಸ್ಥೆಗಳಿಗೆ ಮಾರಾಟ ಮಾಡಬಹುದಾಗಿರುತ್ತದೆ. (ಆದೇಶದ ಪ್ರತಿ ಅನುಬಂಧ-1ರಲ್ಲಿ ಒದಗಿಸಿದೆ).

ಇಲಾಖಾ ವತಿಯಿಂದ ರೈತರ ಜಮೀನುಗಳಲ್ಲಿ/ ಸಾರ್ವಜನಿಕ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಶ್ರೀಗಂಧದ ಮರಗಳನ್ನು ಬೆಳೆಸಲು ಪ್ರೋತ್ಸಾಹವನ್ನು ನೀಡಲಾಗುತ್ತಿದೆ. ಈ ನಿಟ್ಟಿನಲ್ಲಿ ಇಲಾಖೆಯಿಂದ ಸಾರ್ವಜನಿಕ ವಿತರಣೆಗಾಗಿ ಸಸಿಗಳನ್ನು ಬೆಳೆಸುವ ಕಾರ್ಯಕ್ರಮದಡಿ ರೈತರ/ ಸಾರ್ವಜನಿಕರ ಬೇಡಿಕೆಯನುಸಾರ ಸಸಿಗಳನ್ನು ಸರ್ಕಾರದಿಂದ ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದೆ. ಇದರಡಿ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ನೋಂದಾಯಿಸಿಕೊಂಡ ಅರ್ಹ ಫಲಾನುಭವಿಗಳಿಗೆ ಅವರ ಜಮೀನುಗಳಲ್ಲಿ ನೆಟ್ಟು ಬದುಕುಳಿದ ಸಸಿಗಳಿಗೆ ಸರ್ಕಾರಿ ಆದೇಶ ಸಂಖ್ಯೆ:ಅಪಜೀ 88 ಎಫ್‌ಎಪಿ 2019, ದಿನಾಂಕ:27.12.2019ರಂತೆ 1ನೇ ವರ್ಷದ ಅಂತ್ಯದಲ್ಲಿ ರೂ.35/-, 2ನೇ ವರ್ಷದ ಅಂತ್ಯದಲ್ಲಿ ರೂ.40/-, 3ನೇ ವರ್ಷದ ಅಂತ್ಯದಲ್ಲಿ ರೂ.50/- ಹೀಗೆ ಒಟ್ಟು ರೂ.125/- ಗಳನ್ನು ಒಬ್ಬ ಫಲಾನುಭವಿಗೆ ಒಂದು ಬದುಕುಳಿದ ಸಸಿಗೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.

ರಾಜ್ಯದ ರೈತರಿಗೆ ಅರಣ್ಯ ಇಲಾಖೆಯಿಂದ ಶ್ರೀಗಂಧದ ಸಸಿಗಳನ್ನು ರಿಯಾಯಿತಿ ದರದಲ್ಲಿ ಅವರ ಬೇಡಿಕೆಯನುಸಾರ ಸರಬರಾಜು ಮಾಡಲಾಗುತ್ತಿದೆ. ಇಲಾಖಾ ವತಿಯಿಂದ ರೈತರ ವಿತರಣೆಗಾಗಿ ಬೆಳೆಸುವ ಸಸಿಗಳಿಗೆ ತಗುಲುವ ವೆಚ್ಚದ ವಿವರ ಈ ಕೆಳಕಂಡಂತಿದೆ.

| ಸಸಿಗಳ ಅಳತೆ | ಬೆಳೆಸುವ ವೆಚ್ಚ (ರೂ.ಗಳಲ್ಲಿ) | ನಿರ್ವಹಣೆ ವೆಚ್ಚ (ರೂ.ಗಳಲ್ಲಿ) | ಒಟ್ಟು ಪ್ರತಿ ಸಸಿಗೆ ತಗಲುವ ವೆಚ್ಚ (ರೂ.ಗಳಲ್ಲಿ) |
|---|---|---|---|
| 8" X 12" | 24.36 | 7.16 | 31.52 |

ರೈತರಿಗೆ 8" X 12" ಅಳತೆಯ ಸಸಿಗಳನ್ನು ಪ್ರತಿ ಸಸಿಗೆ ರೂ.3ರಂತೆ ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದೆ. ರಾಜ್ಯದಲ್ಲಿ ಅರಣ್ಯ ಪ್ರದೇಶಗಳಲ್ಲಿ ಸ್ವಾಭಾವಿಕವಾಗಿ ಮತ್ತು ನೆಡುತೋಪು ನಿರ್ಮಾಣದ ಮೂಲಕ ಒಟ್ಟಾರೆ 4,699 ಹೆಕ್ಟೇರ್ ಪ್ರದೇಶಗಳಲ್ಲಿ ಬೆಳೆಯಲಾಗಿರುತ್ತದೆ.

ಸಾರ್ವಜನಿಕರ ವಿತರಣೆಗಾಗಿ ಸಸಿಗಳನ್ನು ಬೆಳೆಸುವ ಕಾರ್ಯಕ್ರಮದಡಿ ರೈತರಿಗೆ ರಿಯಾಯಿತಿ ದರಗಳಲ್ಲಿ ವಿವಿಧ ಜಾತಿಯ ಸಸಿಗಳೊಂದಿಗೆ ಶ್ರೀಗಂಧದ ಸಸಿಗಳನ್ನು ಸಹ ವಿತರಿಸಲಾಗುತ್ತಿದೆ.

ಸರ್ಕಾರವು ನಿಗದಿಪಡಿಸುವ ಪ್ರತಿಯೊಂದು ಶ್ರೀಗಂಧ ವರ್ಗದ ಚಿಲ್ಲರೆ ಮಾರಾಟ ದರಗಳನ್ವಯ ಅರಣ್ಯ ಇಲಾಖೆ ಮತ್ತು ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ನಿಗಮವು ಬೆಲೆಯನ್ನು ನೀಡುತ್ತದೆ. ಕಳೆದ ಐದು ವರ್ಷಗಳಿಗೆ ಪ್ರತಿಯೊಂದು ಶ್ರೀಗಂಧ ವರ್ಗಕ್ಕೆ ಸರ್ಕಾರವು ನಿಗದಿಪಡಿಸಿರುವ ಚಿಲ್ಲರೆ ಮಾರಾಟ ದರಗಳ ಮಾಹಿತಿಯನ್ನು ಅನುಬಂಧ-2ರಲ್ಲಿ ಒದಗಿಸಿದೆ

ಸರ್ಕಾರವು ಎಂಎಸ್‌ಟಿಸಿ ಸಂಸ್ಥೆಯ ಇ-ಪೋರ್ಟಲ್ ಮೂಲಕ ಇ-ಹರಾಜಿನಲ್ಲಿ ಪಡೆದ ಪ್ರತಿಯೊಂದು ದರಗಳ ಅನ್ವಯ, ಶ್ರೀಗಂಧ ವರ್ಗಕ್ಕೆ ನಿಗದಿಪಡಿಸುವ ಚಿಲ್ಲರೆ ಮಾರಾಟ ದರಗಳನ್ವಯ ಅರಣ್ಯ ಇಲಾಖೆಯು ರೈತರಿಗೆ ಶ್ರೀಗಂಧ ಬೋನಸ್ ಮೊತ್ತವನ್ನು ಪಾವತಿ ಮಾಡಲಾಗುತ್ತಿದೆ.

ದಿನಾಂಕ: 21-03-2022 ರಂದು ವಿಧಾನ ಪರಿಷತ್ ನಲ್ಲಿ ನಡೆದ ಚರ್ಚೆಯಲ್ಲಿ ಭೂ ಸ್ವಾಧೀನ ಮಾಡಿದ ಪ್ರಕರಣಗಳಲ್ಲಿ ಕಡಿಯಲ್ಪಟ್ಟ ಶ್ರೀಗಂಧ ಗಿಡಗಳಿಗೆ ರೈತರಿಗೆ ಪರಿಹಾರ ಮೊತ್ತಕ್ಕೆ ಸಂಬಂಧಿಸಿದಂತೆ ಅಧಿಕೃತ ಜ್ಞಾಪನ ಸಂಖ್ಯೆ: ಅಪ್ರಮುಅಸಂ(ಅಸಂನಿ)ಬಿ3.ಸೆಲ್ಸ್.ಸಿಆರ್-13/2019-20, ದಿನಾಂಕ: 10-02-2022ರ ಪ್ರತಿಯನ್ನು ಅನುಬಂಧ-3ರಲ್ಲಿ ಒದಗಿಸಿದೆ.

ಸಂಖ್ಯೆ: ಅಪಜೀ 20 ಎಫ್‌ಡಿಪಿ 2022(ಬ್ಲಾ)

(ಉಮೇಶ ವಿ. ಕತ್ತಿ)
ಅರಣ್ಯ ಹಾಗೂ ಆಹಾರ, ನಾಗರೀಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು

ಅನುಬಂಧ-1

# GOVERNMENT OF KARNATAKA

No. FEE 21 FSW 2008

Karnataka Government Secretariat,
M.S. Building,
Bangalore, Dated: 11-07-2008.

## NOTIFICATION

The Government of Karnataka hereby notifies the following Public Sector Undertakings under Rule 108 (1) of the Karnataka Forest Rules 1969 (2002 amendment) to whom the "owner" as defined under Rule 103(C) of the Karnataka Forest Rules 1969 (2002 amendment) can sell the sandalwood trees from any land, on which the "owner" possess a right thereto.

1) Karnataka State Handicraft Development Corporation Ltd.
2) Karnataka Soaps and Detergents Ltd.,

The above notified Public Sector Undertakings are permitted to purchase the said sandalwood from the "owner" at prices negotiated by them with the "owner".

The Public Sector Undertakings / Defence Department / Para military Organisations on whose lands sandal wood is cultivated or has grown naturally are treated as "owner" as per Rule 103 (C) of Karnataka Forest Rules 1969 (2002 amendment).

15 JUL 2008

By order and in the name of the
Governor of Karnataka,

(GOPAL)
Under Secretary to Government,
Forest, Ecology & Environment Department.

To:

The Compiler, Karnataka Gazette, Bangalore - with a request to publish it in extra ordinary gazette and supply 200 copies to the undersigned and 200 copies to the Principal Chief Conservator of Forests, Aranya Bhavan, Malleshwaram, Bangalore.

Copy to:-

1) The Accountant General (A&E), Karnataka, Bangalore.

## ಅನುಬಂಧ-2 (ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2269)

| ಕ್ರ.ಸಂ. | ಶ್ರೀಗಂಧದ ವರ್ಗ | ದರ ರೂ.ಗಳಲ್ಲಿ (ಪ್ರತಿ ಕೆ.ಜಿ.ಗೆ) | | |
|---|---|---|---|---|
| | | 04.07.2016 ರಿಂದ 23.09.2018 | 24.09.2018 ರಿಂದ 09.03.2021 | 10.03.2021 ರಿಂದ ಇಲ್ಲಿಯವರೆಗೆ |
| A | HEART WOOD | | | |
| 1 | Vilayetbudh (Billets-I) | 10285.00 | 10285.00 | 12200.00 |
| 2 | Chinnabudh (Billets-II) | 10897.00 | 10897.00 | 10900.00 |
| 3 | Panjam (Billets-III) | 9877.00 | 9877.00 | 10000.00 |
| 4 | Ghotla | 6410.00 | 6410.00 | 7000.00 |
| 5 | Ghatabadla | 9137.00 | 9137.00 | 12700.00 |
| 6 | Bagardad | 8792.00 | 8792.00 | 10900.00 |
| 7 | Roots-I | 4920.00 | 5576.00 | 9700.00 |
| 8 | Roots-II | 4980.00 | 5502.00 | 8300.00 |
| 9 | Roots-III | 5100.00 | 8200.00 | 8500.00 |
| 10 | Jajpokal I | 10939.00 | 10939.00 | 13700.00 |
| 11 | Jajpokal-II | 10388.00 | 10388.00 | 10600.00 |
| 12 | Ainbagar | 7150.00 | 8827.00 | 8900.00 |
| 13 | Cheriya | 4350.00 | 4829.00 | 5500.00 |
| 14 | Ain Chilta | 4569.00 | 5020.00 | 5400.00 |
| 15 | Hatri Chilta | 2585.00 | 2585.00 | 2850.00 |
| B | MIXED WOOD | | | |
| 16 | Milvachilta | 2153.00 | 2802.00 | 3400.00 |
| 17 | Basola buini | 1728.00 | 3517.00 | 3600.00 |
| 18 | Sawdust | 750.00 | 750.00 | 810.00 |
| C | SAP WOOD | | | |
| 19 | White chips | 80.00 | 89.00 | 105.00 |
| 20 | Bark & Waste | 24.00 | 24.00 | 25.00 |

ಅನುಬಂಧ - 3

ಕರ್ನಾಟಕ ಸರ್ಕಾರ

ಅರಣ್ಯ ಇಲಾಖೆ

ಸಂಖ್ಯೆ: ಅಪ್ರಮುಅಸಂ(ಅಸಂನಿ)ಬಿ3.ಸೇಲ್ಸ್.ಸಿಆರ್-13/2019-20

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು) ರವರ ಕಛೇರಿ.
ಅರಣ್ಯ ಭವನ, ಮಲ್ಲೇಶ್ವರಂ,
ಬೆಂಗಳೂರು, ದಿನಾಂಕ : 10 .02.2022.

# ಅಧಿಕೃತ ಜ್ಞಾಪನ

ವಿಷಯ : ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಭೂ ಸ್ವಾಧೀನ ಮಾಡಿದ ಪ್ರಕರಣಗಳಲ್ಲಿ ಕಡಿಯಲ್ಪಟ್ಟ ಶ್ರೀಗಂಧ ಗಿಡಗಳಿಗೆ ಪರಿಹಾರ ಮೊತ್ತವನ್ನು ನಿಗದಿಪಡಿಸುವ ಕುರಿತು.

ಉಲ್ಲೇಖ :
1 ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಇವರ ಅಧಿಕೃತ ಜ್ಞಾಪನ ಸಮ ಸಂಖ್ಯೆ ದಿನಾಂಕ 12.12.2019.
2 ದಿನಾಂಕ 21.01.2020 ರಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅಭಿವೃದ್ಧಿ) ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆದ ಸಭಾ ನಡವಳಿ.
3 ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ 26.03.2021, 18.06.2021, 17.09.2021, 13.12.2021 ಮತ್ತು 09.11.2021.
4 ದಿನಾಂಕ 06.03.2021 ರಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅಭಿವೃದ್ಧಿ) ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆದ ಸಭಾ ನಡವಳಿ.
5 ಸರ್ಕಾರದ ಪತ್ರ ಸಂಖ್ಯೆ : ಅಪಜೀ 47 ಎಫ್‌ಡಿಪಿ 2020, ದಿನಾಂಕ 01.06.2021, 14.09.2021, 22.10.2021 ಮತ್ತು 02.02.2022.
6 ಸರ್ಕಾರದ ಪ್ರಧಾನ ಕಾರ್ಯದರ್ಶಿ (ಅರಣ್ಯ) ಅಪಜೀ ಇಲಾಖೆ ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ : ಅಪಜೀ 47 ಎಫ್‌ಡಿಪಿ 2020, ದಿನಾಂಕ 30.09.2021.

ಪ್ರಸ್ತಾವನೆ :

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮತ್ತು ಇತರೆ ಉಪಯೋಗಿ ಸಂಸ್ಥೆಗಳು ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಭೂ ಸ್ವಾಧೀನ ಮಾಡಿದ ಪ್ರಕರಣಗಳಲ್ಲಿ ರೈತರು ಬೆಳೆದ ಶ್ರೀಗಂಧ ಗಿಡಗಳಿಗೆ ಪರಿಹಾರ ಮೊತ್ತವನ್ನು ನಿಗದಿಪಡಿಸುವ ಕುರಿತು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರು ಇವರ ಉಲ್ಲೇಖ(1)ರ ಅಧಿಕೃತ ಜ್ಞಾಪನದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅಭಿವೃದ್ಧಿ) ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಮತ್ತು ಇತರೆ ಅಧಿಕಾರಿಗಳ ಒಂದು ತಂಡವನ್ನು ರಚಿಸಲಾಯಿತು. ಸದರಿ ತಂಡವು ದಿನಾಂಕ 21.01.2020 ರಂದು ನಡೆದ ಸಭೆಯಲ್ಲಿ ಐದು ವರ್ಷಕ್ಕೆ ಶ್ರೀಗಂಧ ಗಿಡ ಬೆಳೆಸಲು ತಗಲುವ

ವೆಚ್ಚವನ್ನಾಧರಿಸಿ ಶೇಖಡ ಹತ್ತು ಮೇಲ್ವಿಚಾರಣೆ ಶುಲ್ಕ ಸೇರಿಸಿ ಐದು ವರ್ಷ ಹಳೆಯ ಒಂದು ಶ್ರೀಗಂಧ ಗಿಡಕ್ಕೆ ರೂ.283.00 ಪರಿಹಾರ ಮೊತ್ತವನ್ನು ನಿಗಧಿಪಡಿಸಲಾಗಿತ್ತು.

ತದನಂತರ, ಸದರಿ ವಿಷಯ ಕುರಿತು ದಿನಾಂಕ 18.12.2020 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಶ್ರೀಗಂಧದ ಸಸಿಯನ್ನು ಮೊದಲನೇ ವರ್ಷದಿಂದ ಹತ್ತನೇ ವರ್ಷದವರೆಗೂ ದರವನ್ನು ನಿಗದಿಪಡಿಸಲು ಹಾಗೂ ಪ್ರತಿ ಶ್ರೀಗಂಧದ ಸಸಿಗೆ ಪ್ರತ್ಯೇಕವಾಗಿ ವರ್ಷವಾರು ದರವನ್ನು ನಿಗಧಿಪಡಿಸಿ ಪರಿಷ್ಕರಿಸಿ ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಯಿತು.

ಅದರಂತೆ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅಭಿವೃದ್ಧಿ) ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ 06.03.2021 ರಂದು ನಡೆದ ಸಭೆಯಲ್ಲಿ, ಇಲಾಖೆಯ ಎಸ್.ಎಸ್.ಆರ್. ದರಗಳನ್ವಯ ಪ್ರತಿ ಶ್ರೀಗಂಧದ ಸಸಿಯನ್ನು ಬೆಳೆಸಲು ಮತ್ತು ನಿರ್ವಹಣೆಗೆ ತಗಲುವ ವೆಚ್ಚಗಳ ಆಧಾರದ ಮೇಲೆ ಮೊದಲನೇ ವರ್ಷದಿಂದ ಹತ್ತನೇ ವರ್ಷದವರೆಗೂ ಶ್ರೀಗಂಧ ಮರಗಳನ್ನು ಬೆಳೆಸಲು ಪ್ರತ್ಯೇಕವಾಗಿ ವರ್ಷವಾರು ದರವನ್ನು ನಿಗಧಿಪಡಿಸಲಾಗಿರುತ್ತದೆ. ಸಮಿತಿಯು ಪ್ರತಿ ಶ್ರೀಗಂಧದ ಸಸಿಯನ್ನು ಬೆಳೆಸಲು ಮತ್ತು ನಿರ್ವಹಣೆಗೆ ತಗಲುವ ವೆಚ್ಚಗಳನಲ್ಲದೆ ಇತರೆ ವೆಚ್ಚಗಳಾದ, ಜಮೀನಿನಲ್ಲಿ ಶ್ರೀಗಂಧ ಗಿಡಗಳನ್ನು ಕಾಯಲು ಅಗತ್ಯತೆಗನುಗುಣವಾಗಿ ಕಾಂಪೌಂಡ್ ನಿರ್ಮಾಣ, ತಂತಿ ಬೇಲಿ ನಿರ್ಮಾಣ, ಬೋರ್‌ವೆಲ್ ಹಾಕಿಸಲು ತಗಲುವ ವೆಚ್ಚ, ಹನಿ ನೀರಾವರಿ ಸಂಬಂಧ ಸಲಕರಣೆಗಳ ಖರೀದಿಸಲು ತಗಲುವ ವೆಚ್ಚಗಳನ್ನು ಹಾಗೂ ಇತರೆ ವೆಚ್ಚಗಳನ್ನು ಪರಿಗಣಿಸಿರುವುದಿಲ್ಲ. ಅದರಂತೆ, ಸಭೆಯಲ್ಲಿ ತೀರ್ಮಾನಿಸಿ ನಿಗಧಿಪಡಿಸಿರುವಂತೆ, ಶ್ರೀಗಂಧ ಗಿಡಗಳಿಗೆ ಪರಿಹಾರ ಮೊತ್ತವನ್ನು ನಿಗಧಿಪಡಿಸಲು ಉಲ್ಲೇಖ(3)ರ ಈ ಕಛೇರಿ ಪತ್ರ ದಿನಾಂಕ 26.03.2021ರಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಯಿತು.

ತೋಟಗಾರಿಕೆ ಇಲಾಖೆಯು ರೈತರ / ಸರ್ಕಾರೇತರ / ಸರ್ಕಾರದ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳುವ ಸಂದರ್ಭಗಳಲ್ಲಿ ತೋಟಗಾರಿಕೆ ಬೆಳೆಗಳ ಮೌಲ್ಯಮಾಪನ ದರವನ್ನು ನಿಗಧಿಪಡಿಸುವ ಕುರಿತು ತೋಟಗಾರಿಕೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಇಲಾಖೆ ಅಧಿಕಾರಿಗಳು, ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ (IIHR) ಹೆಸರಘಟ್ಟ, ಬೆಂಗಳೂರು, ತೋಟಗಾರಿಕೆ ವಿಶ್ವವಿದ್ಯಾಲಯ, ಬಾಗಲಕೋಟೆ ಹಾಗೂ ಜಿ.ಕೆ.ವಿ.ಕೆ. ಬೆಂಗಳೂರು ಇಲ್ಲಿನ ತಜ್ಞರನ್ನೊಳಗೊಂಡ ಒಂದು ತಾಂತ್ರಿಕ ಸಮಿತಿಯನ್ನು ರಚಿಸಲಾಗಿರುತ್ತದೆ. ಅದ್ದರಂತೆ, ಸದರಿ ಸಮಿತಿಯ ತೀರ್ಮಾನದಂತೆ ತೋಟಗಾರಿಕೆ ಬೆಳೆಗಳು ಫಸಲು ಬಿಡುವ ಪೂರ್ವಾವಧಿ ಹಾಗೂ ಫಸಲು ಬಿಡುವ ಅವಧಿಯಲ್ಲಿ ಪ್ರತಿ ಮರಕ್ಕೆ ತಗಲುವ

ಸರಾಸರಿ ವಾರ್ಷಿಕ ವೆಚ್ಚ ಮತ್ತು ಆದಾಯದ ಲೆಕ್ಕಾಚಾರಗಳನ್ನಾಧರಿಸಿ ಸರ್ಕಾರದ ಆದೇಶ ಸಂಖ್ಯೆ : ತೋಇ 130 ತೋಇವಿ 2019, ದಿನಾಂಕ 13.12.2019ರಲ್ಲಿ ವಿವಿಧ ಉದ್ದೇಶಗಳಿಗಾಗಿ ತೋಟಗಾರಿಕೆ ಬೆಳೆಗಳ ಮೌಲ್ಯಮಾಪನ ದರಗಳನ್ನು ನಿಗಧಿಪಡಿಸಲಾಗಿದೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿ (ಅರಣ್ಯ) ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬೆಂಗಳೂರು ಇವರು ಉಲ್ಲೇಖ(6)ರ ಅರೆ ಸರ್ಕಾರಿ ಪತ್ರದೊಂದಿಗೆ ಕೃಷಿ ಅರಣ್ಯ ರೈತರು ಮತ್ತು ವಿವಿಧ ಸಂಘ ಸಂಸ್ಥೆಯ ಫೆಡರೇಷನ್ ಪದಾಧಿಕಾರಿಗಳು, ಬೆಂಗಳೂರು ಇವರ ಮನವಿಯಲ್ಲಿ ಪ್ರಸ್ತಾಪಿಸಿರುವ ಅಂಶ / ಕೋರಿಕೆಗಳ ಕುರಿತು ನಿಯಮಾನುಸಾರ ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿಯನ್ನು ಸಲ್ಲಿಸಲು ಉಲ್ಲೇಖ(5)ರ ಸರ್ಕಾರದ ಪತ್ರ ದಿನಾಂಕ 14.09.2021 ಮತ್ತು 22.10.2021ರಲ್ಲಿ ತಿಳಿಸಲಾಗಿರುತ್ತದೆ. ಸದರಿ ಮನವಿಗಳಲ್ಲಿ ಅರಣ್ಯ ಇಲಾಖೆಯು ಶ್ರೀಗಂಧದ ಮರಗಳಿಗೆ ಪರಿಹಾರ ಮೊತ್ತವನ್ನು ನಿಗಧಿಪಡಿಸಿ ಶಿಫಾರಸ್ಸು ಮಾಡಿರುವ ಪ್ರಸ್ತಾವನೆಯನ್ನು ಅನುಮೋದಿಸಬಾರದಾಗಿ ಹಾಗೂ ಭೂಸ್ವಾಧೀನಕ್ಕೊಳಗಾದ ಜಮೀನಿನಲ್ಲಿ ಬೆಳೆದ ಶ್ರೀಗಂಧದ ಬೆಳೆಗೆ ವೈಜ್ಞಾನಿಕ ಬೆಲೆ ನಿಗಧಿಪಡಿಸಿ ಪರಿಹಾರ ನೀಡಲು, ತಜ್ಞರ, ತಾಂತ್ರಿಕ ಪರಿಜ್ಞಾನ ಹೊಂದಿರುವ ತಜ್ಞರು, ರೈತರ ಪ್ರತಿನಿಧಿ, ಕರ್ನಾಟಕ ಕರಕುಶಲ ಸಂಸ್ಥೆಯ ಹಿರಿಯ ಅಧಿಕಾರಿ, ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಸಂಸ್ಥೆಯ ಹಿರಿಯ ಅಧಿಕಾರಿಗಳನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ ತೋಟಗಾರಿಕೆ ಇಲಾಖೆ ಅಳವಡಿಸಿಕೊಂಡಿರುವ ಮಾನದಂಡಗಳನ್ನು ಪರಿಗಣಿಸಿ ಶ್ರೀಗಂಧ ಮರಗಳಿಗೆ ವೈಜ್ಞಾನಿಕವಾಗಿ ಬೆಲೆ ನಿಗಧಿಪಡಿಸಲು ಕೋರಿರುತ್ತಾರೆ. ಸದರಿ ಪತ್ರದೊಂದಿಗೆ ಮರ ವಿಜ್ಞಾನ ಮತ್ತು ತಾಂತ್ರಿಕ ಸಂಸ್ಥೆ, ಬೆಂಗಳೂರು ಇವರು ಅಂದಾಜು ಒಂದು ಎಕರೆ ಜಾಗದಲ್ಲಿ ಶ್ರೀಗಂಧವನ್ನು ಬೆಳೆಸಿದಲ್ಲಿ ಅಂದಾಜು ಲಭ್ಯವಾಗುವ ಶ್ರೀಗಂಧ ಉತ್ಪನ್ನದ ಪ್ರಮಾಣ ಮತ್ತು ಆದಾಯದ ವಿವರಗಳನ್ನು ಲಗತ್ತಿಸಿ ಸಲ್ಲಿಸಿರುತ್ತಾರೆ. ಅದರಂತೆ, ಉಲ್ಲೇಖ(3)ರ ಈ ಕಛೇರಿ ಪತ್ರ ದಿನಾಂಕ 17.09.2021 ರಲ್ಲಿ ನಿರ್ದೇಶಕರು, ಮರ ವಿಜ್ಞಾನ ಮತ್ತು ತಾಂತ್ರಿಕ ಸಂಸ್ಥೆ, ಬೆಂಗಳೂರು ಇವರಿಗೆ ಅರ್ಜಿದಾರರ ಮನವಿ ದಿನಾಂಕ 26.08.2021ನ್ನು ಉಲ್ಲೇಖಿಸಿ ಶ್ರೀಗಂಧ ಉತ್ಪನ್ನದ ಪ್ರಮಾಣ ಮತ್ತು ಆದಾಯದ ವಿವರಗಳ ಲೆಕ್ಕಾಚಾರ ಮಾಡಿರುವುದು ಸರಿಯಿದೆಯೇ ಅಥವಾ ಈ ಸಂಬಂಧ ಇನ್ಯಾವುದೇ ಸಂಶೋಧನಾ ಅಧ್ಯಯನ ಏನಾದರೂ ಇದ್ದಲ್ಲಿ ಈ ಕಛೇರಿಗೆ ಸಲ್ಲಿಸಲು ಕೋರಲಾಯಿತು. ನಿರ್ದೇಶಕರು, ಮರ ವಿಜ್ಞಾನ ಮತ್ತು ತಾಂತ್ರಿಕ ಸಂಸ್ಥೆ, ಬೆಂಗಳೂರು ಇವರು ಪತ್ರ ಸಂಖ್ಯೆ : 22-4/2018-19/IWST/SFM/Misc./265, ದಿನಾಂಕ 07.10.2021ರಲ್ಲಿ ಈ ಕೆಳಕಂಡಂತೆ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

*"With reference to the above, it is to inform that the calculation was not a robust one and more of prediction which needs to be further tested and validated with the field data. Systematic study has not been carried out and IWST is trying to gather information on these aspects.*

To document and obtaining sutable field data, a project would be submitted to Forest Department, Karnataka for funding shortly."

"ಇದು ದೃಢವಾದ ಲೆಕ್ಕಾಚಾರವಾಗಿರುವುದಿಲ್ಲ ಮತ್ತು ಇನ್ನೂ ಹೆಚ್ಚಿನ ಪರೀಕ್ಷೆ ಮತ್ತು ಕ್ಷೇತ್ರ ಮಟ್ಟದಲ್ಲಿ ಪರಿಶೀಲಿಸಿ ಮೌಲ್ಯವನ್ನು ನಿಗಧಿಪಡಿಸಬೇಕಿರುತ್ತದೆ ಹಾಗೂ ಮುಂದಿನ ದಿನಗಳಲ್ಲಿ ಕ್ಷೇತ್ರ ಮಟ್ಟದಲ್ಲಿ ಮಾಹಿತಿಯನ್ನು ಸಂಗ್ರಹಿಸಲು ಅಗತ್ಯ ಅನುದಾನದ ವಿವರವನ್ನು ನಮೂದಿಸಿ ಒಂದು ಯೋಜನೆಯನ್ನು ಇಲಾಖೆಗೆ ಸಲ್ಲಿಸಲಾಗುವುದೆಂದು ತಿಳಿಸಿರುತ್ತಾರೆ."

ಮುಂದುವರಿದು, ಅರ್ಜಿದಾರರ ಮನವಿ ದಿನಾಂಕ 26.08.2021ನ್ನು ಉಲ್ಲೇಖಿಸಿ, ಕರ್ನಾಟಕ ರಾಜ್ಯದಲ್ಲಿನ ಅರಣ್ಯ ಪ್ರದೇಶಗಳಲ್ಲಿ ಹಾಗೂ ರೈತರ ಜಮೀನಿನಲ್ಲಿ ಒಂದನೇ ವರ್ಷದಿಂದ ಇಪ್ಪತ್ತೈದು ವರ್ಷಗಳವರೆಗೆ ಬೆಳೆದ ಶ್ರೀಗಂಧ ಗಿಡಗಳಿಂದ ವರ್ಷವಾರು ಎಷ್ಟು ಪ್ರಮಾಣದ Heart wood, Mixed wood & Sap wood ಮತ್ತು ಅದರಿಂದ ಎಷ್ಟು ಆದಾಯ ದೊರೆಯಬಹುದೆಂಬುದರ ಕುರಿತು ಸಂಶೋಧನೆ ಘಟಕದ ವತಿಯಿಂದ ಮಾಹಿತಿಯನ್ನು ಸಲ್ಲಿಸಲು ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಂಶೋಧನೆ ಮತ್ತು ಬಳಕೆ) ಬೆಂಗಳೂರು ಇವರಿಗೆ ಉಲ್ಲೇಖ(3)ರ ಈ ಕಛೇರಿ ಪತ್ರ ದಿನಾಂಕ 17.09.2021ರಲ್ಲಿ ತಿಳಿಸಲಾಯಿತು.

ಅದರಂತೆ, ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಂಶೋಧನೆ ಮತ್ತು ಬಳಕೆ) ಬೆಂಗಳೂರು ಇವರು ಪತ್ರ ಸಂಖ್ಯೆ : ಅಪ್ರಮುಅಸಂ(ಸಂಬ)ಪಿಎ-ಶ್ರೀಗಂಧ-ಸಿಆರ್-12/2019-20, ದಿನಾಂಕ 28.09.2021ರ ಪತ್ರದೊಂದಿಗೆ ಸಂಶೋಧನೆ ಮತ್ತು ಬಳಕೆ ಘಟಕದ ವತಿಯಿಂದ ಶ್ರೀಗಂಧದ ಬೆಳೆ ಆರ್ಥಿಕತೆಯ ಬಗ್ಗೆ ಹೊರ ತಂದಿರುವ ಕಿರು ಹೊತ್ತಿಗೆಯನ್ನು ಲಗತ್ತಿಸಿ ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಅವಲೋಕಿಸಲಾಗಿ, ಅದರಲ್ಲಿ ನಮೂದಿಸಿರುವ ಪ್ರಮುಖ ಅಂಶಗಳನ್ನು ಈ ಕೆಳಕಂಡಂತೆ ನಮೂದಿಸಿದೆ.

*"ಶ್ರೀಗಂಧದ ಮರದ ವಯಸ್ಸು ಕಳೆದಂತೆ ಅದರ ಬೆಳವಣಿಗೆ ಹಾಗೂ ಒಳತಿರುಳಿನ (Heart wood) ನಿರ್ಮಾಣದ ಬಗೆಗಿನ ನಿಖರವಾದ ಮಾಹಿತಿ ಬಹುತೇಕ ಲಭ್ಯವಿರುವುದಿಲ್ಲ. ಅರಣ್ಯ ಇಲಾಖೆ ವತಿಯಿಂದ ಬೆಳೆಸಲಾದ ಯಶಸ್ವಿ ನೆಡುತೋಪುಗಳು ಸಹ ಬಹಳ ಕಡಿಮೆ ಇರುತ್ತದೆ. ಸಮರ್ಪಕವಾಗಿ ನಿರ್ವಹಣೆ ಮಾಡಿದ ಶ್ರೀಗಂಧದ ನೆಡುತೋಪಿನಲ್ಲಿ (ಪ್ರಾಥಮಿಕ 6-7) ವರ್ಷ ಹಾಗೂ ಬರಗಾಲದ ಅವಧಿಯಲ್ಲಿ ನೀರಾವರಿ ವ್ಯವಸ್ಥೆ ಮಾಡಿದ) ಮರದ ಗಾತ್ರದ ಬೆಳವಣಿಗೆ ಪ್ರತಿ ವರ್ಷ ಸರಾಸರಿ ಹೆಚ್ಚಳ 2.5 ಸೆ.ಮೀ. ನಿಂದ 3 ಸೆ.ಮೀ ರವರೆಗೆ ಇರುವುದು ಗಮನಿಸಲಾಗಿರುತ್ತದೆ. ಆದರೆ, ಈ ರೀತಿಯ ಬೆಳವಣಿಗೆ ನೆಡುತೋಪಿನಾದ್ಯಂತ ಒಂದೇ ತರನಾಗಿ ಇರುವುದಿಲ್ಲ (ಇತರೆ ನೆಡುತೋಪು ಬೆಳಗೆ ಹೋಲಿಸಿದಲ್ಲಿ). ಆದ್ದರಿಂದ, 15 ವರ್ಷಗಳ ನಂತರ ನೆಡುತೋಪಿನಲ್ಲಿನ ಶೇಖಡ 10-15 ರಷ್ಟು ಮರಗಳು 5-8 ಕೆ.ಜಿ. ಪ್ರತಿ ಮರಕ್ಕೆ ಒಳತಿರುಳು (Heart wood) (ಬೇರಿನ ಭಾಗವೂ ಒಳಗೊಂಡಂತೆ) ಹೊಂದಬಹುದೆಂದು ನಿರೀಕ್ಷಿಸಬಹುದಾಗಿರುತ್ತದೆ. ಈ ಪ್ರಮಾಣವು ನೆಡುತೋಪಿನ ಉತ್ತಮ ನಿರ್ವಹಣೆಯ ಮೇಲೆ ಅವಲಂಬಿಸಿರುತ್ತದೆ."*

ಹತ್ತು ವರ್ಷ ಹಳೆಯದಾದ ಶ್ರೀಗಂಧ ಮರಗಳ ಮೌಲ್ಯ ನಿರ್ಧರಿಸುವ ವಿಚಾರದಲ್ಲಿ ಹಾರ್ಟ್ ವುಡ್ ಇಂತಿಷ್ಟು ಪ್ರಮಾಣ ಅಭಿವೃದ್ಧಿಗೊಂಡಿರುತ್ತದೆ ಎಂಬುದನ್ನು ಖಚಿತವಾಗಿ ನಿರ್ಣಯಿಸಲು

ಸಾಧ್ಯವಿರುವುದಿಲ್ಲ ಹಾಗೂ ರೈತರು ತೋಟಗಾರಿಕೆ ಬೆಳೆಗಳನ್ನು ಬೆಳೆಸುವುದರಲ್ಲಿ ಅನುಸರಿಸುವ ಕ್ರಮಗಳು ಹಾಗೂ ಶ್ರೀಗಂಧ ಮರಗಳನ್ನು ಬೆಳೆಸುವುದರಲ್ಲಿ ಅನುಸರಿಸುವ ಕ್ರಮಗಳು ವಿಭಿನ್ನವಾಗಿರುತ್ತದೆ ಎಂದು ಅಭಿಪ್ರಾಯ ಸಲ್ಲಿಸಿರುತ್ತಾರೆ.

ಮುಂದುವರಿದು, ಕರ್ನಾಟಕ ರಾಜ್ಯದಲ್ಲಿ ಕೃಷಿ ಅರಣ್ಯದಲ್ಲಿ ಶ್ರೀಗಂಧ ಗಿಡಗಳ ಮೌಲ್ಯಮಾಪನ ಕುರಿತು ಸಂಶೋಧನಾ ಅಧ್ಯಯನವನ್ನು ಸಿದ್ದಪಡಿಸಿ ಸಲ್ಲಿಸಲು ನಿರ್ದೇಶಕರು, ಮರ ವಿಜ್ಞಾನ ಮತ್ತು ತಾಂತ್ರಿಕ ಸಂಸ್ಥೆ, ಬೆಂಗಳೂರು ಇವರಿಗೆ ಉಲ್ಲೇಖ(3)ರ ಈ ಕಛೇರಿ ಪತ್ರ ದಿನಾಂಕ 13.12.2021ರಲ್ಲಿ ಕೋರಲಾಗಿದ್ದು, ವರದಿ ಈ ಕಛೇರಿಯಲ್ಲಿ ಈವರೆಗೂ ಸ್ವೀಕೃತವಾಗಿರುವುದಿಲ್ಲ. ನಿರ್ದೇಶಕರು, ಮರ ವಿಜ್ಞಾನ ಮತ್ತು ತಾಂತ್ರಿಕ ಸಂಸ್ಥೆ, ಬೆಂಗಳೂರು ಇವರಿಂದ ಸಂಶೋಧನಾ ವರದಿ ಸ್ವೀಕೃತಿಯಾದ ನಂತರ ಪರಿಗಣಿಸಬಹುದಾಗಿರುತ್ತದೆ.

ಈ ವಿಷಯವನ್ನು ಸರ್ಕಾರದ ಹಂತದಲ್ಲಿ ದಿನಾಂಕ 21.11.2021 ಹಾಗೂ ಸನ್ಮಾನ್ಯ ಅರಣ್ಯ ಹಾಗೂ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ನಡೆಸಿದ ಸಭೆ ದಿನಾಂಕ 21.12.2021 ರಂದು ಮತ್ತು 20.01.2022 ರಂದು ಸಹ ಚರ್ಚೆ ಆಗಿರುತ್ತದೆ.

ಪ್ರಸ್ತುತ, ಉಲ್ಲೇಖ(5)ರ ಸರ್ಕಾರದ ಪತ್ರ ದಿನಾಂಕ 02.02.2022ರಲ್ಲಿ ಈ ಕಛೇರಿ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಈ ಕೆಳಕಂಡಂತೆ ಅನುಮತಿ ನೀಡಲಾಗಿದೆ. ಶ್ರೀಗಂಧ ಗಿಡಗಳಿಗೆ ಪರಿಹಾರ ಮೊತ್ತವನ್ನು ನಿಗಧಿಪಡಿಸಲು ರಚಿತವಾದ ಅಧಿಕಾರಿಗಳ ತಂಡವು ಚರ್ಚಿಸಿ, ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಭೂಸ್ವಾಧೀನ ಮಾಡಿದ ಪ್ರಕರಣಗಳಲ್ಲಿ ಕಡಿಯಲ್ಪಟ್ಟ ಪ್ರತಿ ಶ್ರೀಗಂಧದ ಸಸಿಗೆ ಮೊದಲನೇ ವರ್ಷದಿಂದ ಹತ್ತನೇ ವರ್ಷದವರೆಗೂ ಪ್ರತ್ಯೇಕವಾಗಿ ವರ್ಷವಾರು ಪ್ರಸ್ತಾಪಿಸಿರುವ ಈ ಕೆಳಕಂಡ ದರಗಳನ್ನು ನಿಗಧಿಪಡಿಸಿದೆ.

| Sl. No. | Age of the Sandal plant | Compensation amount per sandalwood plant (in Rs.) |
|---|---|---|
| 1 | 1 year old | 420.00 |
| 2 | 2 year old | 513.00 |
| 3 | 3 year old | 596.00 |
| 4 | 4 year old | 679.00 |
| 5 | 5 year old | 762.00 |
| 6 | 6 year old | 845.00 |
| 7 | 7 year old | 928.00 |
| 8 | 8 year old | 1011.00 |
| 9 | 9 year old | 1094.00 |
| 10 | 10 year old | 1177.00 |

(ಈ ದರಗಳು ಪ್ರತಿ ಹೆಕ್ಟೇರ್‌ಗೆ ಗರಿಷ್ಠ 400 ಸಸಿಗಳಿಗೆ ಅನ್ವಯವಾಗುತ್ತದೆ)

ಮೇಲೆ ನಿಗಧಿಪಡಿಸಿದ ದರಗಳಲ್ಲದೇ, ಸದರಿ ಮರಗಳಿಂದ ತೆಗೆಯಲ್ಪಟ್ಟ ಶ್ರೀಗಂಧದ ಸಂಪೂರ್ಣ ಮೌಲ್ಯವನ್ನು ಸಹ ಸಂಬಂಧಪಟ್ಟ ರೈತರಿಗೆ ಪಾವತಿಸಲು ಸರ್ಕಾರದ ಅನುಮತಿ ನೀಡಲಾಗಿದೆ ಎಂದು ಹಾಗೂ ಮಾನ್ಯ ಅರಣ್ಯ ಹಾಗೂ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರಿಂದ ಅನುಮೋದಿತ ಎಂದು ಸಹ ತಿಳಿಸಲಾಗಿದೆ. ಅದರಂತೆ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಭೂ ಸ್ವಾಧೀನ ಮಾಡಿದ ಪ್ರಕರಣಗಳಲ್ಲಿ ಕಡಿಯಲ್ಪಟ್ಟ ಶ್ರೀಗಂಧ ಗಿಡಗಳಿಗೆ ಪರಿಹಾರ ಮೊತ್ತವನ್ನು ಈ ಕೆಳಕಂಡಂತೆ ನಿಗಧಿಪಡಿಸಿದೆ.

| ಕ್ರ. ಸಂ. Sl. No. | ಶ್ರೀಗಂಧ ಗಿಡದ ವಯಸ್ಸು Age of the Sandal plant | ಪ್ರತಿಯೊಂದು ಶ್ರೀಗಂಧ ಗಿಡಕ್ಕೆ ಪರಿಹಾರ ಮೊತ್ತ (ರೂ.ಗಳಲ್ಲಿ) Compensation amount per sandalwood plant (in Rs.) |
|---|---|---|
| 1 | 1 ವರ್ಷ ಹಳೆಯದಾದ | 420.00 |
| 2 | 2 ವರ್ಷ ಹಳೆಯದಾದ | 513.00 |
| 3 | 3 ವರ್ಷ ಹಳೆಯದಾದ | 596.00 |
| 4 | 4 ವರ್ಷ ಹಳೆಯದಾದ | 679.00 |
| 5 | 5 ವರ್ಷ ಹಳೆಯದಾದ | 762.00 |
| 6 | 6 ವರ್ಷ ಹಳೆಯದಾದ | 845.00 |
| 7 | 7 ವರ್ಷ ಹಳೆಯದಾದ | 928.00 |
| 8 | 8 ವರ್ಷ ಹಳೆಯದಾದ | 1011.00 |
| 9 | 9 ವರ್ಷ ಹಳೆಯದಾದ | 1094.00 |
| 10 | 10 ವರ್ಷ ಹಳೆಯದಾದ | 1177.00 |

(ಈ ದರಗಳು ಪ್ರತಿ ಹೆಕ್ಟೇರ್‌ಗೆ ಗರಿಷ್ಟ 400 ಸಸಿಗಳಿಗೆ ಅನ್ವಯಿವಾಗುತ್ತದೆ)

ಮೇಲೆ ನಿಗಧಿಪಡಿಸಿದ ದರಗಳಲ್ಲದೇ, ಸದರಿ ಮರಗಳಿಂದ ತೆಗೆಯಲ್ಪಟ್ಟ ಶ್ರೀಗಂಧದ ಸಂಪೂರ್ಣ ಮೌಲ್ಯವನ್ನು ಸಹ ಸಂಬಂಧಪಟ್ಟ ರೈತರಿಗೆ ಪಾವತಿಸಲು ಅನುಮತಿಸಿದೆ.

ಮೇಲಿನಂತೆ ನಿಗಧಿಪಡಿಸಿದ ಶ್ರೀಗಂಧ ಗಿಡಗಳಿಗೆ ಪರಿಹಾರ ಮೊತ್ತವನ್ನು ಇಲಾಖೆಯ ಎಸ್.ಎಸ್.ಆರ್. ದರಗಳನ್ವಯ ಪ್ರತಿ ಶ್ರೀಗಂಧದ ಸಸಿಯನ್ನು ಬೆಳೆಸಲು ಮತ್ತು ನಿರ್ವಹಣೆಗೆ ತಗಲುವ ವೆಚ್ಚಗಳ ಆಧಾರದ ಮೇಲೆ ಮೊದಲನೇ ವರ್ಷದಿಂದ ಹತ್ತನೇ ವರ್ಷದವರೆಗೂ ಶ್ರೀಗಂಧ ಮರಗಳನ್ನು ಬೆಳೆಸಲು ಪ್ರತ್ಯೇಕವಾಗಿ ವರ್ಷವಾರು ದರವನ್ನು ನಿಗಧಿಪಡಿಸಲಾಗಿರುತ್ತದೆ. ಹಾಗೂ, ರೈತರು ತಮ್ಮ

ಸ್ವಂತ ಜಮೀನಿನಲ್ಲಿ ಶ್ರೀಗಂಧ ಗಿಡಗಳನ್ನು ಕಾಯಲು ಅಗತ್ಯತೆಗನುಗುಣವಾಗಿ ಕಾಂಪೌಂಡ್ ನಿರ್ಮಾಣ, ತಂತಿ ಬೇಲಿ ನಿರ್ಮಾಣ, ಬೋರ್‌ವೆಲ್ ಹಾಕಿಸಲು ತಗಲುವ ವೆಚ್ಚ, ಹನಿ ನೀರಾವರಿ ಸಂಬಂಧ ಸಲಕರಣೆಗಳ ಖರೀದಿಸಲು ತಗಲುವ ವೆಚ್ಚಗಳನ್ನು ಹಾಗೂ ಇತರೆ ವೆಚ್ಚಗಳನ್ನು ಇದರಲ್ಲಿ ಸೇರಿರುವುದಿಲ್ಲ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)

ಇವರಿಗೆ;

1. ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ (ಪ್ರಾದೇಶಿಕ ವಿಭಾಗಗಳು).
2. ಎಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ / ಅರಣ್ಯ ಸಂರಕ್ಷಣಾಧಿಕಾರಿಗಳಿಗೆ (ಪ್ರಾದೇಶಿಕ ವೃತ್ತಗಳು).

**ಪ್ರತಿಯನ್ನು ಮಾಹಿತಿಗಾಗಿ :**

1. ಗೌರವಗಳೊಂದಿಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅಭಿವೃದ್ಧಿ) ಬೆಂಗಳೂರು.
3. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಎನ್‌ಎಫ್‌ಎಪಿ & ಬಂಬೂ ಮಿಷನ್)/ (ಆಡಳಿತ ಮತ್ತು ಸಮನ್ವಯ)/ (ಸಂಶೋಧನೆ ಮತ್ತು ಬಳಕೆ), ದೊರೆಸಾನಿಪಾಳ್ಯ, ಬೆಂಗಳೂರು.
4. i) ಪ್ರಾದೇಶಿಕ ಅಧಿಕಾರಿ, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಸರ್ವೆ ನಂ.13, ದೀಪಕ್ ಬಸ್ ಸ್ಟಾಂಡ್ ಹತ್ತಿರ, ನಾಗಸಂದ್ರ ಮೇಟ್ರೋ ಸ್ಟೇಷನ್ ಹತ್ತಿರ, ತುಮಕೂರು ರಸ್ತೆ (ಎನ್‌ಹೆಚ್–14) ಬೆಂಗಳೂರು – 560 073.

   ii) ಯೋಜನಾ ನಿರ್ದೇಶಕರು, ಯೋಜನಾ ಅನುಷ್ಠಾನ ಘಟಕ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಕೆ.ಆರ್. ವೃತ್ತ, ಬೆಂಗಳೂರು – 560 001.

   iii) ಯೋಜನಾ ನಿರ್ದೇಶಕರು, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಯೋಜನಾ ಅನುಷ್ಠಾನ ಘಟಕ, "ಶ್ರೀ ರಕ್ಷ" 80 ಅಡಿ ರಸ್ತೆ, ಮಹಾಲಕ್ಷ್ಮಿನಗರ, ಕೃಷ್ಣ ಕಾಲೇಜ್ ಹತ್ತಿರ, ಬಟವಾಡಿ, ತುಮಕೂರು – 572103.
5. i) ಅಧ್ಯಕ್ಷರು, ಕರ್ನಾಟಕ ರಾಜ್ಯ ಶ್ರೀಗಂಧ ಮತ್ತು ಕೃಷಿ ಅರಣ್ಯ ಮರಗಳ ಬೆಳೆಗಾರರ ಸಂಘ, ನಂ.80, ಅನಿಕೇತನ, 14ನೇ ಬಿ ಮುಖ್ಯರಸ್ತೆ, ಪಶ್ಚಿಮ ಕಾರ್ಡ್ ರಸ್ತೆ, ಮಹಾಲಕ್ಷ್ಮೀಪುರಂ, ಬೆಂಗಳೂರು – 560 086.

   ii) ಅಧ್ಯಕ್ಷರು, ಅಖಿಲ ಕರ್ನಾಟಕ ಶ್ರೀಗಂಧ ಮತ್ತು ವನಕೃಷಿ ಬೆಳೆಗಾರರ ಸಂಘ, ನಂ.300, 10ನೇ ಮೈನ್ ರಸ್ತೆ, 14ನೇ ಕ್ರಾಸ್, 2ನೇ ಹಂತ, ಇಂದಿರಾನಗರ, ಬೆಂಗಳೂರು – 560 038.

   iii) ಅಧ್ಯಕ್ಷರು, ಶ್ರೀಗಂಧ ರಕ್ಷಣಾ ವೇದಿಕೆ (ರಿ) ಬೈರವ ನಿಲಯ, ಕೋಡಿ ಕ್ಯಾಂಪ್, ತರೀಕೆರೆ – 577 228.
6. ಹೆಚ್ಚುವರಿ ಪ್ರತಿ.